ಕೊರಟಗೆರೆ ಕ್ಷೇತ್ರವ್ಯಾಪ್ತಿಯಲ್ಲಿ ಮೀನು ಪಾಶುವಾರು ಹಕ್ಕುಗಳ ಪಡೆದಿರುವ ಫಲಾನುಭವಿಗಳ ವಿವರ.

2207(2260) ಶ್ರೀ ಚಿನ್ನಿಗಪ್ಪ ಸಿ. (ಕೊರಟಗೆರೆ) :— ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ತುಮಕೂರು ಜಿಲ್ಲೆ ಕೊರಟಗೆರೆ ಕ್ಷೇತ್ರ ವ್ಯಾಪ್ತಿಯಲ್ಲಿ ಮೀನು ಸಾಕಾಣಿಕಾ ಪಾಶುವಾರು ಹಕ್ಕುಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?

2) ಈ ಮೀನು ಸಾಕಾಣಿಕಾ ಪಾಶುವಾರು ಹಕ್ಕುಗಳನ್ನು ಸಂಘ ಸಂಸ್ಥೆ ಹಾಗೂ ಮಹಿಳಾ ಸಂಘಕ್ಕೆ ಯಾವ ಆದ್ಯತೆ ಮೇಲೆ ನೀಡಲಾಗುವುದು.

3) ಈ ಮೀನು ಸಾಕಾಣಿಕಾ ಪಾಶುವಾರು ಹಕ್ಕುಗಳಿಂದ ಸರ್ಕಾರಕ್ಕೆ ಸಂದಾಯವಾಗುವ ಹಣವೆಷ್ಟು?

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

1)

ವರ್ಷ	ಫಲಾನುಭವಿಗಳ ಸಂಖ್ಯೆ
1998-1999	37
1999-2000	34
2000-2001	29

2) ಮೀನು ಪಾಶುವಾರು ಹಕ್ಕನ್ನು ಸರ್ಕಾರಿ ಆದೇಶ ಸಂಖ್ಯೆ ಎಹೆಚ್‌ಎಫ್ 52 ಎಸ್‌ಎಫ್‌ಎಂ 95 ದಿನಾಂಕ 9-6-97ರ ಮೇರೆಗೆ ಈ ಕೆಳಗಿನಂತೆ ಆದ್ಯತೆ ಮೇರೆಗೆ ನೀಡಲಾಗುತ್ತಿದೆ.

ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ) ಮೈಸೂರು	ಮೊದಲನೇ ಆದ್ಯತೆ
ಮೀನುಗಾರರ ಸಹಕಾರ ಸಂಘ	ಎರಡನೇ ಆದ್ಯತೆ
ಮೀನುಗಾರರ ಮಹಿಳೆಯರ ಸಹಕಾರ ಸಂಘ	ಮೂರನೇ ಆದ್ಯತೆ
(ಗ್ರಾಮ ಪಂಚಾಯಿತಿ)	ಆರನೇ ಆದ್ಯತೆ
ನೋಂದಾಯಿತ ಮಹಿಳಾ ಮತ್ತು ಯುವಕ ಸಂಘ	ಏಳನೇ ಆದ್ಯತೆ

3) 1998-99	ರೂ. 3,20,587.00
1999-2000	ರೂ. 3,72,640.00
2000-2001	ರೂ.12,86,579.00